ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 158 (1319)
2. ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ (ವಿಧಾನ ಸಭೆಯಿಂದ ಚುನಾಯಿರಾದವರು)
3. ಉತ್ತರಿಸಬೇಕಾದ ದಿನಾಂಕ : 15-03-2022
4. ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ದಕ್ಷಿಣ ಕನ್ನಡ ಜಿಲ್ಲೆಯ ಮಹಾನಗರ ವ್ಯಾಪ್ತಿಯಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರಿಗಾಗಿ ರಸ್ತೆಗಳನ್ನು ಅಗೆದು ಸಮರ್ಪಕವಾಗಿ ಮುಚ್ಚದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಗೆ ಮಂಗಳೂರು ಮಹಾನಗರಪಾಲಿಕೆ ಬರುತ್ತದೆ ಸದರಿ ಮಹಾನಗರ ಪಾಲಿಕೆ ವ್ಯಾಪ್ತಯಲ್ಲಿ ಕೆಯುಐಡಿಎಫ್‌ಸಿ ವತಿಯಿಂದ ಕ್ವಿಮಿಪ್ ಕಾರ್ಯಕ್ರಮದಡಿ ಅನುಷ್ಠಾನಗೊಳಿಸುತ್ತಿರುವ ಒಳಚರಂಡಿ ಮತ್ತು ಕುಡಿಯುವ ನೀರು ಕಾಮಗಾರಿಗಳಿಗಾಗಿ ಅಗೆದ ರಸ್ತೆಗಳನ್ನು ಯಥಾಸ್ಥಿತಿಗೆ ತರಲು ವಿಶಿಷ್ಟ ವಿವರಣೆಯಂತೆ (Special Specification) ಕ್ರಮವಹಿಸಲಾಗುತ್ತಿದೆ. ಮಣ್ಣಿನ ಬಲವರ್ಧನೆ ಆಗಲು ಸಮಯಾವಕಾಶ ಹಿಡಿಯುವುದರಿಂದ ಬಲವರ್ಧನೆಯಾದ ನಂತರವೆ ಇಂಟರ್‌ಲಾಕ್/ಟಾರ್/ಕಾಂಕ್ರೀಟ್ ಇತ್ಯಾದಿಗಳನ್ನು ಅಳವಡಿಸಿ ಮೂಲ ಸ್ಥಿತಿಗೆ ತರಲು ಕ್ರಮವಹಿಸಲಾಗುತ್ತಿದೆ.
(ಆ)	ದಕ್ಷಿಣ ಕನ್ನಡ ಜಿಲ್ಲೆಯ ಮಹಾನಗರ ವ್ಯಾಪ್ತಿಯಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರಿನ ಸೌಲಭ್ಯಗಳನನ್ನು ಒದಗಿಸಲು ಕಳೆದ 3 ವರ್ಷಗಳಲ್ಲಿ ಮಾಡಿದ ವೆಚ್ಚವೆಷ್ಟು; ಎಷ್ಟು ಮೊತ್ತದ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ; ಎಷ್ಟು ಮನೆಗಳಿಗೆ ಒಳರಂಡಿ ಸಂಪರ್ಕವನ್ನು ಒದಗಿಸಲಾಗಿದೆ; (ವಿವರ ನೀಡುವುದು)	ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕ್ವಿಮಿಪ್ ಕಾರ್ಯಕ್ರಮದಡಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಅಮೃತ್ ಮತ್ತು ರಾಜ್ಯ ಸರ್ಕಾರದ ನೆರವಿನೊಂದಿಗೆ 6 ಒಳಚರಂಡಿ ಕಾಮಗಾರಿಗಳು ಮತ್ತು 2 ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಾಮಗಾರಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ಮಾಡಿದ ವೆಚ್ಚ, ಕಾಮಗಾರಿಗಳ ಪ್ರಸ್ತುತ ಪ್ರಗತಿಯ ವಿವರಗಳನ್ನು **ಅನುಬಂಧ-1** ದಲ್ಲಿ ಒದಗಿಸಿದೆ. 6 ಒಳಚರಂಡಿ ಕಾಮಗಾರಿಗಳಲ್ಲಿ, 5 ಒಳಚರಂಡಿ ಕಾಮಗಾರಿಗಳು ಹಾಲಿ ಹಾಲಿ ಸುಮಾರು 50 ವರ್ಷಗಳ ಹಳೆಯ ಒಳಚರಂಡಿ ವ್ಯವಸ್ಥೆಯ ಪುನರುತ್ಥಾನ ಕಾಮಗಾರಿಗಳಾಗಿವೆ. ಇದರಲ್ಲಿ ಮನೆಗಳಿಗೆ ಹೊಸ ಒಳಚರಂಡಿ ಸಂಪರ್ಕವನ್ನು ಒದಗಿಸುವುದನ್ನು ಒಳಗೊಂಡಿರುವುದಿಲ್ಲ. ಉಳಿದ 1 ಒಳಚರಂಡಿ ಕಾಮಗಾರಿಯಲ್ಲಿ ಮಂಗಳೂರಿನ ವಲಯ 9, 12 & 13 ರಲ್ಲಿ ಹೊಸದಾಗಿ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲಾಗುತ್ತಿದೆ. ಇದರಲ್ಲಿ ಜನವರಿ-2022ವರೆಗೆ ಒಟ್ಟು 2102 ಸಂಖ್ಯೆಯಲ್ಲಿ 408 ಮನೆಗಳಿಗೆ ಒಳಚರಂಡಿ ಸಂಪರ್ಕವನ್ನು ನೀಡಲಾಗಿದೆ.
(ಇ)	ರಾಷ್ಟ್ರೀಯ ಜಲ ಜೀವನ ಯೋಜನೆಯ ಅನ್ವಯ ಎಷ್ಟು ಮನೆಗಳಿಗೆ ನಲ್ಲಿ ನೀರಿನ ಸಂಪರ್ಕವನ್ನು ಒದಗಿಸಲಾಗಿದೆ; ಎಷ್ಟು ಅರ್ಜಿಗಳು ವಿಲೇವಾರಿಗಾಗಿ ಬಾಕಿ ಇವೆ? (ವಿವರ ನೀಡುವುದು)	ಮಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಜಲ ಜೀವನ ಯೋಜನೆಯ ಅನ್ವಯ ಯಾವುದೇ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕವನ್ನು ಒದಗಿಸಿರುವುದಿಲ್ಲ, ಹೀಗಾಗಿ ಯಾವುದೇ ಅರ್ಜಿಗಳು ವಿಲೇವಾರಿಗೆ ಬಾಕಿ ಇರುವುದಿಲ್ಲ.

ಸಂಖ್ಯೆ: ನಅಇ 48 ಪಿಆರ್‌ಜೆ 2022

(ಬಿ.ಎ.ಬಸವರಾಜು)
ನಗರಾಭಿವೃದ್ಧಿ ಸಚಿವರು.

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ - 1

ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ(ಕ್ವಿಮಿಪ್)ದಡಿ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳ ವಿವರ

ಕ್ರ ಸಂ	ಕಾಮಗಾರಿಯ ಹೆಸರು	ಗುತ್ತಿಗೆದಾರರ ಹೆಸರು	ಗುತ್ತಿಗೆಯ ಮೊತ್ತ (ಕೋಟಿಗಳಲ್ಲಿ)	ಪ್ರಾರಂಭ ದಿನಾಂಕ	ಮುಕ್ತಾಯ ದಿನಾಂಕ	ಕಳೆದ ಮೂರು ವರ್ಷಗಳಲ್ಲಿನ (2018-19 ರಿಂದ ಫೆಬ್ರವರಿ-22 ರವರೆಗಿನ ವೆಚ್ಚ (ಕೋಟಿಗಳಲ್ಲಿ)	ಭೌತಿಕ ಪ್ರಗತಿ
ಒಳಚರಂಡಿ ಕಾಮಗಾರಿಗಳು							
1	ಹಾಲಿ ಒಳಚರಂಡಿ ಪಂಪಿಂಗ್ ಮೈನ್ ಪೈಪಲೈನ್ ಬದಲಿ	ಮೆ/ಡಿ.ಆರ್.ಎಸ್ ಇನ್ಫ್ರಾಟೆಕ್ ಪ್ರೈ.ಲಿ	84.56	06.06.2018	27.07.2021	84.56	100%
2	ಸುರತ್ಕಲ್ ಒಳಚರಂಡಿ ವ್ಯವಸ್ಥೆಯ ಪುನಃಶ್ಚೇತನ ಮತ್ತು ಮಿಸ್ಸಿಂಗ್ ಲಿಂಕಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು.	ಮೆ/ಕೆಜಿಆರ್ ಇನ್ಫ್ರಾಟೆಕ್ ಪ್ರೈ.ಲಿ	77.97	06.06.2018	31.05.2022	66.83	93.22%
3	ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 1,4&7) ಮಂಗಳೂರು-2	ಮೆ/ಸಿಂಪ್ಲೆಕ್ಸ್ ಇನ್ಫ್ರಾಟೆಕ್ ಪ್ರೈ.ಲಿ	52.96	06.03.2019	05.06.2022	15.36	30.35%
4	ಹಾಲಿ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ7) ಮಂಗಳೂರು-3	ಮೆ/ಸಿಂಪ್ಲೆಕ್ಸ್ ಇನ್ಫ್ರಾಟೆಕ್ ಪ್ರೈ.ಲಿ	33.06	06.03.2019	05.06.2022	7.54	13.64%
5	ಒಳಚರಂಡಿ ವ್ಯವಸ್ಥೆಯ ಪುನರ್ ನಿರ್ಮಾಣ (ವಲಯ 3&5)	ಮೆ/ಸಿಂಪ್ಲೆಕ್ಸ್ ಇನ್ಫ್ರಾಟೆಕ್ ಪ್ರೈ.ಲಿ	41.84	28.01.2020	27.04.2022	0.94	10.37%
6	ಮಂಗಳೂರು ನಗರದ ವಲಯ 9,12&13 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು.	ಮೆ/ಸಿಂಪ್ಲೆಕ್ಸ್ ಇನ್ಫ್ರಾಟೆಕ್ ಪ್ರೈ.ಲಿ	38.42	28.01.2020	27.04.2022	5.50	16.59%

ಕ್ರ ಸಂ	ಕಾಮಗಾರಿಯ ಹೆಸರು	ಗುತ್ತಿಗೆದಾರರ ಹೆಸರು	ಗುತ್ತಿಗೆಯ ಮೊತ್ತ (ಕೋಟಿಗಳಲ್ಲಿ)	ಪ್ರಾರಂಭ ದಿನಾಂಕ	ಮುಕ್ತಾಯ ದಿನಾಂಕ	ಕಳೆದ ಮೂರು ವರ್ಷಗಳಲ್ಲಿನ (2018-19 ರಿಂದ ಫೆಬ್ರವರಿ-22 ರವರೆಗಿನ ವೆಚ್ಚ (ಕೋಟಿಗಳಲ್ಲಿ)	ಭೌತಿಕ ಪ್ರಗತಿ
ಕುಡಿಯುವ ನೀರು ಸರಬರಾಜು ಕಾಮಗಾರಿಗಳು							
1	ಸಗಟು ನೀರು ಸರಬರಾಜು ಕಾಮಗಾರಿ	ಮೆ/ಎಸ್‌ಎಂಸಿ ಇನ್ಫ್ರಾಟೆಕ್ ಪ್ರೈ.ಲಿ.	35.29	05.03.2019	31.05.2022	22.34	61.46%
2	24x7 ಕುಡಿಯುವ ನೀರು ಸರಬರಾಜು ಕಾಮಗಾರಿ	ಮೆ/ಸೂಯಜ್ ಪ್ರಜೆಕ್ಟ್ ಪ್ರೈ.ಲಿ- ಸೂಯಜ್ ಇಂಡಿಯಾ ಪ್ರೈ.ಲಿ- ಡಿ.ಆರ್.ಎಸ್ ಇನ್ಫ್ರಾಟೆಕ್ ಪ್ರೈ.ಲಿ(ಜೆ.ವಿ)	585.30	24.12.2019	24.08.2023	165.10	23.42%

Task Manager
KIUWMIP, KUIDFC